DFA/..2574

File No. TD/133/TDQ/2022-DO-Trans (Computer No. 954558)

ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 623

ಸದಸ್ಯರ ಹೆಸರು : ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು)

ಉತ್ತರಿಸಬೇಕಾದ ಸಚಿವರು : ಮಾನ್ಯ ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸಬೇಕಾದ ದಿನಾಂಕ : 23-12-2022

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಆನ್‌ಲೈನ್ ಮೂಲಕ ಬಾಡಿಗೆಗೆ ವಾಹನಗಳನ್ನು ನೀಡುವ ಓಲಾ, ಊಬರ್ ಮತ್ತು ರಾಪಿಡೋ ಎಂಬ ಖಾಸಗಿ ಸಂಸ್ಥೆಗಳಿಗೆ ಸರ್ಕಾರ ಅನುಮತಿಯನ್ನು ನೀಡಿದೆಯೇ; ಹಾಗಿದ್ದಲ್ಲಿ ಈ ಕಂಪನಿಗಳಿಗೆ ಯಾವ ಕಾಲಮಿತಿಯವರೆಗೆ ಅನುಮತಿಯನ್ನು ನೀಡಲಾಗಿದೆ; ಅವಧಿ ಮುಗಿದ ತರುವಾಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಅನುಮತಿ ನೀಡಲಾಗಿದೆ.<br><br>ಓಲಾ ಕಂಪನಿಗೆ ಲೈಸೆನ್ಸ್ ಸಂಖ್ಯೆ 1/2016-17 ವಾಯಿದೆ ದಿನಾಂಕ: 20-06-2016 ರಿಂದ 19-06-2021 ರವರೆಗೆ ಮತ್ತು ಊಬರ್ ಕಂಪನಿಗೆ ಲೈಸೆನ್ಸ್ ಸಂಖ್ಯೆ 2/2016-17 ವಾಯಿದೆ ದಿನಾಂಕ: 31-12-2016 ರಿಂದ 30-12-2021ರ ವರೆಗೆ ಲೈಸೆನ್ಸ್ ನೀಡಲಾಗಿತ್ತು. ಲೈಸೆನ್ಸ್ ನವೀಕರಣಕ್ಕಾಗಿ ಅರ್ಜಿ ಸಲ್ಲಿಸಿದ್ದು ಅರ್ಜಿಯು ರಾಜ್ಯ ಸಾರಿಗೆ ಪ್ರಾಧಿಕಾರದ ಮುಂದೆ ಪರಿಶೀಲನೆಯಲ್ಲಿದೆ.<br><br>ಕರ್ನಾಟಕ ಉಚ್ಚ ನ್ಯಾಯಾಲಯವು ರಿಟ್ ಅಪೀಲು ಸಂಖ್ಯೆ: 4787-4788/2016 ರಲ್ಲಿ ನೀಡಿರುವ ಮಧ್ಯಂತರ ಆದೇಶ "during the pendency of these writ appeals, the authorities shall not take any coercive action against the appellants for violation of the Karnataka On Demand Transportation Technology Aggregator Rules 2016 without the leave of the Court" ರ ಪ್ರಕಾರ ರಾಜ್ಯ ಸರ್ಕಾರವು ಯಾವುದೇ ಕ್ರಮವನ್ನು ಕೈಗೊಳ್ಳಲು ನಿರ್ಬಂಧವಿರುತ್ತದೆ.<br><br>ರಾಪಿಡೋ ಎಂಬ ಖಾಸಗಿ ಸಂಸ್ಥೆಗೆ ಯಾವುದೇ ಅಗ್ರಿಗೇಟರ್ ಲೈಸೆನ್ಸ್ ನೀಡಲಾಗಿಲ್ಲ. |
| ಆ | ಸದರಿ ಸಂಸ್ಥೆಗಳಿಗೆ ಸರ್ಕಾರವು ವಿಧಿಸಿರುವ ಷರತ್ತುಗಳೇನು; ಸದರಿ ಸಂಸ್ಥೆಗಳಿಂದ ಸರ್ಕಾರಕ್ಕೆ ಬರುತ್ತಿರುವ ವಾರ್ಷಿಕ ತೆರಿಗೆಯೆಷ್ಟು; | Karnataka On Demand Transportation Technology Aggregator Rules 2016 ರ ನಿಯಮ 3, 4, 5, 6, 7, 8, 9ರ ಅಡಿಯಲ್ಲಿ ಷರತ್ತುಗಳನ್ನು ವಿಧಿಸಲಾಗಿರುತ್ತದೆ.<br><br>ನಿಯಮಾವಳಿಗಳ ಅಡಿಯಲ್ಲಿ ಯಾವುದೇ ತೆರಿಗೆ ಅಥವಾ ರಾಯಲ್ಟಿಯನ್ನಾಗಲಿ ಸದರಿ ಸಂಸ್ಥೆಗಳಿಂದ ಸಂಗ್ರಹಿಸುವ ಅವಕಾಶವಿರುವುದಿಲ್ಲ. |
| ಇ | ಇತ್ತೀಚೆಗೆ ಸದರಿ ಸಂಸ್ಥೆಗಳು ಸಾರ್ವಜನಿಕರಿಂದ ಮನಸೋ ಇಚ್ಛೆ ದರವನ್ನು ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ | ಸರ್ಕಾರದ ಗಮನಕ್ಕೆ ಬಂದಿದೆ.<br><br>ಸದರಿ ಸಂಸ್ಥೆಗಳು ಸಾರ್ವಜನಿಕರಿಂದ ಮನಸೋ ಇಚ್ಛೆ ದರ |



Generated from eOffice by B SREERAMULU, TD-MIN(BS), TRANSPORT MINISTER, Trans on 15/12/2022 06:35 PM

| | | |
|---|---|---|
| | ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಕೈಗೊಂಡಿರುವ ಮುಂಜಾಗ್ರತಾ ಕ್ರಮಗಳೇನು; | ವಸೂಲಿ ಮಾಡುತ್ತಿರುವುದನ್ನು ಗಮನಿಸಿ ತಕ್ಷಣದಿಂದ ಸೇವೆಯಿಂದ ಆಟೋಗಳನ್ನು ಹಿಂಪಡೆಯುವಂತೆ ನೋಟೀಸ್ ನೀಡಲಾಗಿತ್ತು. ನಂತರ ಸದರಿ ಸಂಸ್ಥೆಗಳು ನಡೆಸುತ್ತಿದ್ದ ಆಟೋರಿಕ್ಷಾ ಅಗ್ರಿಗೇಟರ್ ಸೇವೆಯನ್ನು ಸ್ಥಗಿತಗೊಳಿಸುವಂತೆ ಆದೇಶವನ್ನು ನೀಡಲಾಗಿದೆ. ಸದರಿ ಆದೇಶವನ್ನು ಲೈಸೆನ್ಸ್ ಹೊಂದಿರುವ ಸಂಸ್ಥೆಗಳು ರಿಟ್ ಅರ್ಜಿ ಸಂಖ್ಯೆ 20349/2022 ಮತ್ತು ಇತರ ಪ್ರಕರಣಗಳಲ್ಲಿ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದ ಕಾರಣ ಮಾನ್ಯ ಉಚ್ಚ ನ್ಯಾಯಾಲಯವು ಪ್ರಾದೇಶಿಕ ಸಾರಿಗೆ ಪ್ರಾಧಿಕಾರ, ಬೆಂಗಳೂರು ದಿನಾಂಕ:06-11-2021ರಲ್ಲಿ ನಿಗದಿ ಪಡಿಸಿರುವ ದರದ ಜೊತೆಗೆ ಶೇಕಡ 10 ರಷ್ಟು ಸೇವಾ ಶುಲ್ಕ ಮತ್ತು ಅನ್ವಯಿಸುವ ತೆರಿಗೆಯನ್ನು ಸಂಗ್ರಹಿಸಲು ಅನುಮತಿ ನೀಡಿದೆ. ರಾಜ್ಯ ಸರ್ಕಾರಕ್ಕೆ ಸೂಕ್ತ ದರ ನಿಗದಿಪಡಿಸಲು ನಿರ್ದೇಶನ ನೀಡಿದನ್ವಯ ರಾಜ್ಯ ಸರ್ಕಾರವು ದಿನಾಂಕ.25-11-2022 ರಂದು ಅಧಿಸೂಚನೆ ಹೊರಡಿಸಿ ಅಗ್ರಿಗೇಟರ್ ಸೇವೆ ನೀಡುವ ಸಂಸ್ಥೆಗಳಿಗೆ ಶೇಕಡ 5 ರಷ್ಟು ಸೇವಾ ಶುಲ್ಕವನ್ನು ಮತ್ತು ಅನ್ವಯಿಸುವ ಜಿ.ಎಸ್.ಟಿ ತೆರಿಗೆಯನ್ನು ಸಂಗ್ರಹಿಸಲು ನಿಗದಿ ಪಡಿಸಿದೆ. ಈ ಆದೇಶವನ್ನೂ ಸಹ ಅಗ್ರಿಗೇಟರ್ ಸೇವೆ ಒದಗಿಸುವ ಸಂಸ್ಥೆಗಳು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು, ಪ್ರಕರಣಗಳು ಬಾಕಿ ಇರುತ್ತವೆ. |
| ಈ | ದರ ನಿಗಧಿಗೊಳಿಸುವ ಅಧಿಕಾರವನ್ನು ಸರ್ಕಾರ ಹೊಂದಿದೆಯೇ; ಅಥವಾ ಈ ಸಂಸ್ಥೆಗಳು ಹೊಂದಿವೆಯೇ? (ಸಂಪೂರ್ಣ ವಿವರವನ್ನು ಒದಗಿಸುವುದು). | ಮೋಟಾರು ವಾಹನ ಕಾಯ್ದೆ 1988ರ ಸೆಕ್ಷನ್ 67ರ ರೀತ್ಯ ರಾಜ್ಯ ಸರ್ಕಾರವು ಪ್ರಯಾಣ ದರ ನಿಗಧಿಪಡಿಸುವ ಅಧಿಕಾರವನ್ನು ಹೊಂದಿರುತ್ತದೆ. ಅಗ್ರಿಗೇಟರ್ ಸೇವೆ ಒದಗಿಸುವ ಸಂಸ್ಥೆಗಳಿಗೆ ದರ ನಿಗಧಿಪಡಿಸಲು ಯಾವುದೇ ಅಧಿಕಾರವಿರುವುದಿಲ್ಲ. |

ಟಿಡಿ 133 ಟಿಡಿಕ್ಯೂ 2022

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ
ಸಚಿವರು.



Generated from eOffice by B SREERAMULU, TD-MIN(BS), TRANSPORT MINISTER, Trans on 15/12/2022 06:25 PM